ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 09.01.2024.

**ಪಾಟೀ ಸವಾಲು: 1, 2 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಿಂದ:**

ಈ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ತಾತನ ಹೆಸರು ಗುರುಬಸಪ್ಪ ಇರುತ್ತದೆ. ನನ್ನ ತಾತನಿಗೆ ಒಟ್ಟು ಎಕರೆ ಜಮೀನುಗಳು ಇರುತ್ತವೆ ಎಂದು ಗೊತ್ತಿಲ್ಲ ಆದರೆ, ಜಮೀನುಗಳು ಇರುತ್ತವೆ. ಮನೆ ಎಷ್ಟು ಇವೆ ಎಂದು ಗೊತ್ತಿಲ್ಲ ಆದರೆ, ಚಿಂಚೋಳಿ ಹಾಗೂ ಕಲಬುರಗಿಯಲ್ಲಿ ಇರುತ್ತವೆ. ನನ್ನ ತಂದೆ ಶಿವಶರಣಪ್ಪ ರವರು 1991 ರಲ್ಲಿ ತಿರಿಕೊಂಡಿರುತ್ತಾರೆ. ನನ್ನ ತಂದೆಗೆ ಮೂರು ಅಣ್ಣ-ತಮ್ಮಂದಿರು, ಇಬ್ಬರು ಅಕ್ಕ-ತಂಗಿಯರು ಇರುತ್ತಾರೆ. ನಾನು ಹಾಜರುಪಡಿಸಿದ ವಂಶಾವಳಿಯಲ್ಲಿ ನನ್ನ ತಂದೆಗೆ ಶಾಂತಬಾಯಿ ಮಾತ್ರ ಸಹೋದರಿ ಇರುತ್ತಾಳೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಸುಶೀಲಾಬಾಯಿಯನ್ನು ವಂಶಾವಳಿಯಲ್ಲಿ ತೋರಿಸಿಲ್ಲ, ಸದರಿ ಸುಶೀಲಾಬಾಯಿ ಜೀವಂತ ಇರುವುದಿಲ್ಲ. ಸದರಿ ಸುಶೀಲಾಬಾಯಿಗೆ ಒಬ್ಬ ಮಗಳು ಇರುತ್ತಾಳೆ, ಅವಳ ಹೆಸರು ಮಹಾನಂದ ಇರುತ್ತದೆ.

ನನ್ನ ತಂದೆ ತಿರಿಕೊಂಡ ಕಾಲಕ್ಕೆ ನನ್ನ ಅಜ್ಜ ಜೀವಂತ ಇದ್ದ. ಚಿಂಚೋಳಿಯಲ್ಲಿರುವ ಜಮೀನುಗಳು ಇವತ್ತಿನವರೆಗೂ ಕೂಡಿ ಇರುತ್ತವೆ. ನಮ್ಮ ಕುಟುಂಬದ ಜಮೀನುಗಳನ್ನು ನನ್ನ ಚಿಕ್ಕಪ್ಪಂದಿರು ಉಳಮೆ ಮಾಡುತ್ತಾರೆ, ಯಾರು ಎಷ್ಟು ಉಳಮೆ ಮಾಡುತ್ತಾರೆ ಎಂದು ಗೊತ್ತಿಲ್ಲ ಹಾಗೂ ಕುಟುಂಬದ ಮ್ಯಾನೆಜರ್ ಯಾರು ಇರುತ್ತಾರೆ ಎಂದು ನನಗೆ ಅಷ್ಟು ಗೊತ್ತಿಲ್ಲ. ನನ್ನ ತಾತ ಗುರುಬಸಪ್ಪ ರವರು ಲಾಡ ಚಿಂಚೋಳಿ ಗ್ರಾಮದಲ್ಲಿರುವ ಜಮೀನುಗಳನ್ನು ಮೌಖಿಕವಾಗಿ ವಾಟ್ನಿ ಮಾಡಿಕೊಟ್ಟಿರುತ್ತಾರೆ ಎಂದು ಹಾಗೂ ಅದರ

ಪ್ರಕಾರ ಮ್ಯೂಟೇಷನ್ ಕೂಡಾ ದಿಃ 18.03.1994 ರಂದು ಆಗಿರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ.

ಅದೇ ರೀತಿ 2 ಸರ್ವೆ ನಂಬರಗಳ ಜಮೀನುಗಳು 1 ಮತ್ತು 2 ನೇ ಪ್ರತಿವಾದಿಯರಿಗೆ ಬಂದಿರುತ್ತವೆ ಎಂದು ನಾನು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರಿಗೆ ಬಂದಂತಹ ಆಸ್ತಿಗಳನ್ನು ನನ್ನ ಚಿಕ್ಕಪ್ಪಂದಿರೇ ಉಳಮೆ ಮಾಡುತ್ತಿದ್ದಾರೆ. ಸದರಿ ವಾಟ್ನಿಯಲ್ಲಿ ನನ್ನ ತಾತನ 2 ನೇ ಮಗ ಅಣ್ಣಾರಾವ್ ಮತ್ತು ತೇಜರಾವ್ ರವರಿಗೆ ಎಷ್ಟು ಆಸ್ತಿಗಳು ಹೋಗಿರುತ್ತವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬಂದಿರುತ್ತವೆ, ಆದರೆ ನನಗೆ ನಿಖರವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಾಟ್ನಿಯಾದಾಗ ನನ್ನ ತಂದೆ ಎಷ್ಟು ವರ್ಷದವರೆಗೆ ಸೇವೆಯಲ್ಲಿ ಇದ್ದರು ಎಂಬುವುದರ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ.

ನನ್ನ ತಂದೆ ನೌಕರಿಗೆ ಸೇರಿದ ನಂತರ ಕಲಬುರಗಿಯಲ್ಲಿ ಮನೆ ಮಾಡಿಕೊಂಡು ತಮ್ಮ ಖರ್ಚನ್ನು ತಾವೆ ಭರಿಸಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆ ಶಿವಶರಣಪ್ಪ ರವರಿಗೆ ಜಮೀನುಗಳ ಉತ್ಪನ್ನ ಯಾವುದು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಶಿವಶರಣಪ್ಪ ರವರಿಗೆ ಇಂತಿಷ್ಟು ಉತ್ಪನ್ನ ಜಮೀನುಗಳಿಂದ ಬರುತ್ತಿತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ತಂದೆ ತಮ್ಮ ಕುಟುಂಬದಲ್ಲಿ ಜಮೀನುಗಳಿಂದ ಬರುವ ಆಧಾರಯ ಸಾಲದೇ ಇರುವ ಕಾರಣ ನೌಕರಿಗೆ ಸೇರಿದ್ದರು ಎಂದರೆ ಸರಿ. ಕಲಬುರಗಿಯಲ್ಲಿರುವ ಮನೆಯನ್ನು ನನ್ನ ತಾಯಿ ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ತಾಯಿ ನನ್ನ ತಂದೆಯ ಪಿಂಚಣಿ ಹಣದಿಂದ ಕಲಬುರಗಿಯಲ್ಲಿರುವ

ಮನೆಯನ್ನು ಖರೀದಿಸಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ತಾಯಿ ಕಲಬುರಗಿಯಲ್ಲಿರುವ ತನ್ನ ಸ್ವಂತ ಹಣದಿಂದ ಖರೀದಿಸಿರುತ್ತಾಳೆ, ಅದರಲ್ಲಿ ಯಾರದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಕಲಬುರಗಿಯಲ್ಲಿರುವ ಮನೆಯನ್ನು ಏಕತ್ರ ಕುಟುಂಬದ ಉತ್ಪನ್ನದಿಂದ ಖರೀದಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ಸ್ವಂತ ಖರ್ಚಿನ ಸಲುವಾಗಿ ಅವಳಿಗೆ ಮಾರಾಟ ಮಾಡಬೇಕೆಂದು ಅನ್ನಿಸಿದ್ದರಿಂದ 2018 ರಲ್ಲಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಕಲಬುರಗಿಯಲ್ಲಿರುವ ಮನೆಯಲ್ಲಿ ರೂ.35,00,000/-ಕ್ಕೆ ಮಾರಾಟ ಮಾಡಿರುತ್ತಾರೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಿಪಿ-8 ರಂತೆ ಕಲಬುರಗಿಯ ಮನೆಯನ್ನು ರೂ.15,00,000/- ಮಾರಾಟ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ.

ನನ್ನ ತಾಯೇ ನಮ್ಮೆಲ್ಲರ ಮದುವೆಯ ಖರ್ಚುನ್ನು ಮತ್ತು ಆಗು ಹೋಗುಗಳನ್ನು ನನ್ನ ತಂದೆಯ ಪಿಂಚಣಿ ಸಹಾಯದಿಂದ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ.2 ಮತ್ತು 3 ರ ಸ್ವತ್ತಿನಿಂದ ಯಾವುದೇ ಬೆಳೆ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.4 ರ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತು ಹಾಗೂ ಅದರಲ್ಲಿ ನಮಗೆ ಯಾವುದೇ ರೀತಿ ಭಾಗ ಮತ್ತು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಹಾಗೂ ಅಕ್ರಮ ಲಾಭ ಪಡೆಯಬೇಕೆಂದು ದುರು ಉದ್ದೇಶದಿಂದ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮಹಾದೇವಪ್ಪ, ಬಸವರಾಜ ನಾಗೂರು ಹಾಗೂ ಬಾಬುರಾವ್ ಪಾಟೀಲ್ ನಮ್ಮ

ಸಂಬಂಧಿಕರು ಎಂದರೆ ಸರಿ. ಸದರಿ ಮೇಲೆ ಹೇಳಿದ ಸಾಕ್ಷಿದಾರರ ಹೇಳಿಕೆ ಮೇರೆಗೆ ಈ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಾರಾಟದಿಂದ ಬಂದ ಹಣವನ್ನು ನನ್ನ ತಾಯಿಯಿಂದ ಖಸಿದುಕೊಳ್ಳಬೇಕೆಂಬ ದುರುಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**